ಹೆಚ್ಚುವರಿ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ ನ್ಯಾಯಾಲಯ, ಹೊನ್ನಾಳಿ

ಸಿ.ಸಿ. ನಂ. 467-2016

ಸರ್ಕಾರ ವಿರುದ್ಧ ಆರೋಪಿ : ಶ್ರೀ. ರಂಗಪ್ಪ ಮತ್ತು ಇತರರು

ದೋಷಾರೋಪಣೆ

ನಾನು ಶ್ರೀ. ಎಂ ವಿಜಯ್, ಬಿ.ಎ.ಎಲ್. ಎಲ್.ಎಲ್.ಬಿ. ಹೆ. ಪ್ರ. ದ ನ್ಯಾ. ದಂ., ಹೊನ್ನಾಳಿ.

ಆರೋಪಿತರಾದ ನೀವು

1. ರಂಗಪ್ಪ ಬಿನ್ ಲೇಟ್ ತಿಮ್ಮಪ್ಪ
   ವಯಸ್ಸು 72 ವರ್ಷ, ವ್ಯವಸಾಯ.
2. ಜಯಪ್ಪ ಬಿನ್ ರಂಗಪ್ಪ
   ವಯಸ್ಸು 28 ವರ್ಷ, ವ್ಯವಸಾಯ,
3. ರಾಘವೇಂದ್ರ ಬಿನ್ ರಂಗಪ್ಪ
   ವಯಸ್ಸು 30 ವರ್ಷ, ವ್ಯವಸಾಯ
4. ಶ್ರೀಮತಿ ಇಂದ್ರಮ್ಮ ಕೋಂ ರಂಗಪ್ಪ
   ವಯಸ್ಸು 42 ವರ್ಷ, ಮನೆಕೆಲಸ

ಇವರೆಲ್ಲರ ವಾಸಃ ಫಲವನಹಳ್ಳಿ ಗ್ರಾಮ,
ಹೊನ್ನಾಳಿ ತಾಲ್ಲೂಕು.

ಎಂಬುವವರ ಮೇಲೆ ಆಪಾದನೆ ಹೊರಿಸುವುದೇನೆಂದರೆ,

ದಿನಾಂಕಃ 27-01-2016 ರಂದು ಸಂಜೆ 6.00 ಗಂಟೆ ಸಮಯದಲ್ಲಿ ಹೊನ್ನಾಳಿ ತಾಲ್ಲೂಕು ಫಲವನಹಳ್ಳಿ ಗ್ರಾಮದ ಸಾಕ್ಷಿ.1 ಶ್ರೀನಿವಾಸರವರ ವಾಸದ ಮನೆಯ ಮುಂದಿನ ಬೀದಿಯ ಗ್ರಾಮ ಪಂಚಾಯ್ತಿಯ ಸಿಮೆಂಟ್ ಕಾಂಕ್ರೀಟ್ ರಸ್ತೆಯಲ್ಲಿ ಆರೋಪಿತರು ಸಾಕ್ಷಿ.1 ಶ್ರೀನಿವಾಸರವರ ವಾಸದ ಮನೆಯ ಮುಂದೆ ಸಾಕ್ಷಿ.1, 4 ಮತ್ತು 5 ರವರಾದ ಶ್ರೀನಿವಾಸ, ರತ್ನಮ್ಮ ಮತ್ತು ಹರೀಶರವರಿಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತೀರಿ. ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 504 ಸಹವಾಚನ ಕಲಂ 34 ರಡಿಯಲ್ಲಿ ಶಿಕ್ಷಿಸಲ್ಪಡುವಂತಹ ಅಪರಾದವನ್ನು ನನ್ನ ಸಂಜ್ಞಾನದೊಳಗೆ ಎಸಗಿರುತ್ತೀರಿ.

ಎರಡನೇಯದಾಗಿ, ಮೇಲಿನ ದಿನ, ಸ್ಥಳ ಹಾಗೂ ವೇಳೆಯಂದು 1ನೇ ಆರೋಪಿಯಾದ ನೀವು ಸಾಕ್ಷಿ.1 ಶ್ರೀನಿವಾಸರವರ ತಲೆಗೆ ಕೈಯಿಂದ ಹೊಡೆದಿದ್ದು, 3ನೇ ಆರೋಪಿ ತನ್ನ ಕೈ ಉಗುರುಗಳಿಂದ ಸಾಕ್ಷಿ.5 ಹರೀಶರವರ ಎಡಗೈ ರಟ್ಟೆಗೆ ಗೀರಿದ್ದು, ಆರೋಪಿ.4 ರವರು ಸಾಕ್ಷಿ.4 ರತ್ನಮ್ಮರವರಿಗೆ ಕೈ ಕಾಲುಗಳಿಂದ ಹೊಡೆದು ನೋವುಂಟು ಮಾಡಿರುತ್ತೀರಿ. ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 323 ಸಹವಾಚನ ಕಲಂ 34 ರಡಿಯಲ್ಲಿ ಶಿಕ್ಷಿಸಲ್ಪಡುವಂತಹ ಅಪರಾದವನ್ನು ನನ್ನ ಸಂಜ್ಞಾನದೊಳಗೆ ಎಸಗಿರುತ್ತೀರಿ.

ಮೂರನೇಯದಾಗಿ, ಮೇಲಿನ ದಿನ, ಸ್ಥಳ ಹಾಗೂ ವೇಳೆಯಂದು 2ನೇ ಆರೋಪಿಯಾದ ನೀವು ಕಟ್ಟಿಗೆಯಿಂದ ಸಾಕ್ಷಿ.1 ಶ್ರೀನಿವಾಸರವರ ಮರ್ಮಾಂಗಕ್ಕೆ ಹೊಡೆದು ಮತ್ತು ಆರೋಪಿ 2 ರವರು ಕಬ್ಬಿಣದ

ತುಂಡಿನಿಂದ ಸಾಕ್ಷಿ.1 ಶ್ರೀನಿವಾಸರವರ ಬಲಗಾಲಿಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯಪಡಿಸಿರುತ್ತೀರಿ, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 324 ಸಹವಾಚನ ಕಲಂ 34 ರಡಿಯಲ್ಲಿ ಶಿಕ್ಷಿಸಲ್ಪಡುವಂತಹ ಅಪರಾದವನ್ನು ನನ್ನ ಸಂಜ್ಞಾನದೊಳಗೆ ಎಸಗಿರುತ್ತೀರಿ.

ನಾಲ್ಕನೇಯದಾಗಿ, ಮೇಲಿನ ದಿನ, ಸ್ಥಳ ಹಾಗೂ ವೇಳೆಯಂದು ಆರೋಪಿತರು ಸಾಕ್ಷಿ.1, 4 ಮತ್ತು ಸಾಕ್ಷಿ.5 ರವರಾದ ಶ್ರೀನಿವಾಸ, ರತ್ನಮ್ಮ ಮತ್ತು ಹರೀಶರವರಿಗೆ ಪ್ರಾಣ ಬೆದರಿಕೆ ಹಾಕಿರುತ್ತೀರಿ. ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 506 ಸಹವಾಚನ ಕಲಂ 34 ರಡಿಯಲ್ಲಿ ಶಿಕ್ಷಿಸಲ್ಪಡುವಂತಹ ಅಪರಾದವನ್ನು ನನ್ನ ಸಂಜ್ಞಾನದೊಳಗೆ ಎಸಗಿರುತ್ತೀರಿ.

ಈ ಮೇಲೆ ತಿಳಿಸಿದ ಆರೋಪಗಳ ವಿಚಾರಣೆಯು ಇದೇ ಕೋರ್ಟಿನ ಅಧಿಕಾರ ವ್ಯಾಪ್ತಿಯಲ್ಲಿರುವುದರಿಂದ ವಿಚಾರಣೆಯಾಗಲು ಆದೇಶಿಸಿದ್ದೇನೆ.

ತಾಃ 2017 ಸಮವರ್ತಿ ಪ್ರಭಾರ ಹೆ ಪ್ರ. ದ. ನ್ಯಾ. ದಂ., ಹೊನ್ನಾಳಿ.

ಪ್ರಶ್ನೆ-1ಃ ಮೇಲೆ ಓದಿ ಹೇಳಿದ ನಿಮ್ಮಗಳ ಮೇಲೆ ಮಾಡಿರುವ ಆರೋಪಗಳು ತಿಳಿಯಿತೇ?

ಉತ್ತರಃ ತಿಳಿಯಿತು

ಪ್ರಶ್ನೆ-2ಃ ಸದರಿ ಆರೋಪಗಳನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೆ?

ಉತ್ತರಃ ವಿಚಾರಣೆಯಾಗಲಿ

ಆರೋಪಿ ನಂ.1)

ಆರೋಪಿ ನಂ.2)

ಆರೋಪಿ ನಂ.3)

ಆರೋಪಿ ನಂ.4)

ತಾಃ 2017 ಸಮವರ್ತಿ ಪ್ರಭಾರ ಹೆ ಪ್ರ. ದ. ನ್ಯಾ. ದಂ., ಹೊನ್ನಾಳಿ.